ಬಾಲ್ಯ ಎಂದರೆ ಆಡುವ ವಯಸ್ಸು. ಹೊಸ ಹೊಸ ಬೆರಗುಗಳಿಗೆ ತೆರೆದುಕೊಳ್ಳುತ್ತಾ ಅರಳುವ ಮೊಗ್ಗಿನಂತಹ ಬಾಲ್ಯ, ರೆಕ್ಕೆಬಿಚ್ಚಿ ಬಾನಂಗಳ ಕಬಳಿಸುವ ಹಕ್ಕಿಯ ಮನದಂತೆ. ಹಾರಿ ಕುಣಿಯುತ್ತ, ಬಿದ್ದು ಏಳುತ್ತಾ ಕಳೆಯುವ ಸವಿ ಗಳಿಗೆಯದು. ಆದರೆ ಇಂದಿನ ಮಕ್ಕಳು ದೊಡ್ಡವರಂತೆ ಸಮಯ–ವ್ಯವಸ್ಥೆಯ ಬಂದಿಯಾಗಿದ್ದಾರೆ. ಆಡುವ ಸಮಯ ಮೈನಸ್ ಆಗಿ ಕಲಿಯುವ ಸಮಯ ಪ್ಲಸ್ ಆಗುತ್ತಿದೆ. ಮಕ್ಕಳ ಉಜ್ವಲ ಭವಿಷ್ಯದ ಕನಸು ಕಾಣುವ ತಂದೆತಾಯಂದಿರು ಮಕ್ಕಳ ಪ್ರತಿ ಕ್ಷಣವೂ ವ್ಯರ್ಥವಾಗದಂತೆ ನೋಡಿಕೊಳ್ಳುವ ಹವಣಿಕೆಯಲ್ಲಿದ್ದಾರೆ. ಹೀಗಾಗಿಯೇ ಶಾಲೆಯ ನಂತರದ ಅವರ ಸಮಯ ವೇಳಾಪಟ್ಟಿಯ ಅಚ್ಚಿಗೆ ಎರಕ ಹೊಯ್ದಂತೆ ಏಕರೂಪವಾಗುತ್ತಿದೆ.

ದಶಕಗಳ ಹಿಂದೆ ಪಠ್ಯೇತರ ಚಟುವಟಿಕೆಗಳು ಮಕ್ಕಳ ವಿದ್ಯಾಭ್ಯಾಸಕ್ಕೆ ಕುತ್ತು ಎಂದು ಭಾವಿಸುವವರು ಹೆಚ್ಚಿದ್ದರು. ಸಂಗೀತ, ನೃತ್ಯ, ಕ್ರಿಕೆಟ್ ಅಥವಾ ಇನ್ನಾವುದೇ ಕ್ರೀಡೆಯ ನೆಪದಲ್ಲಿ ಮಕ್ಕಳು ವಿದ್ಯಾಭ್ಯಾಸದತ್ತ ಚಿತ್ತ ಹರಿಸುವುದಿಲ್ಲ ಎನ್ನುವುದು ಪೋಷಕರ ದುಗುಡಕ್ಕೆ ಕಾರಣವಾಗುತ್ತಿತ್ತು. ಮಗುವಿನ ಪ್ರತಿಭೆಯನ್ನೆಲ್ಲಾ ಶಿಕ್ಷಣದಲ್ಲೇ ವ್ಯಯಿಸಿ ದೊಡ್ಡ ನೌಕರಿ ಹಿಡಿದರೆ ಸಾಕು, ಹೆಚ್ಚೆಚ್ಚು ದುಡಿಯುವುದೇ ಬದುಕಿನ ಪರಮೋದ್ದೇಶ ಎನ್ನುತ್ತಿದ್ದರು.

ಆದರೆ ಇಂದಿನವರ ನಿರೀಕ್ಷೆಯಲ್ಲಿ ಕೊಂಚ ಬದಲಾವಣೆ ಆಗಿದೆ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತಮ್ಮ ಮಕ್ಕಳು ಮುಂದಿರಬೇಕು ಎಂದು ಪೋಷಕರು ಬಯಸುತ್ತಿದ್ದಾರೆ. ಬಾಲ್ಯದಲ್ಲಿ ತಮಗೆ ದಕ್ಕದ ವಿದ್ಯೆಗಳನ್ನು ಮಕ್ಕಳಿಗಾದರೂ ಸಿಗುವಂತೆ ಮಾಡಬೇಕು. ಅವರು ಸಾಧನೆಯ ಹಾದಿಯಲ್ಲಿ ಮಿಂಚುವುದನ್ನು ಕಾಣಬೇಕು ಎಂದು ಆಶಿಸುತ್ತಿದ್ದಾರೆ. ಅದಕ್ಕೆ ಅಗತ್ಯ ವೇದಿಕೆಯನ್ನು ಮಕ್ಕಳಿಗೆ ಒದಗಿಸಿ ಕೊಡುವ ಸರ್ವಪ್ರಯತ್ನವನ್ನೂ ಪೋಷಕರು ಮಾಡುತ್ತಿದ್ದಾರೆ. ತಮ್ಮ ಮನದಾಸೆಯನ್ನು ಮಕ್ಕಳ ಮೂಲಕ ಈಡೇರಿಸಿಕೊಳ್ಳುವ ತವಕ ಇಂದಿನ ಪೋಷಕರಲ್ಲಿ ಹೆಚ್ಚುತ್ತಿದೆ.

ಹೆಚ್ಚಿದ ಈ ನಿರೀಕ್ಷೆಗಳಿಗೆ ಟೀವಿಯಲ್ಲಿ ರಾರಾಜಿಸುವ ರಿಯಾಲಿಟಿ ಶೋಗಳ ಕೊಡುಗೆ ದೊಡ್ಡದಿದೆ. ಮಕ್ಕಳ ಮೇಲೆ ಬೆಟ್ಟದಷ್ಟು ನಿರೀಕ್ಷೆ ಇಟ್ಟುಕೊಳ್ಳುತ್ತಿರುವ ಪೋಷಕರಿಗೆ ಕಿರುತೆರೆ ಕಾರ್ಯಕ್ರಮಗಳಲ್ಲಿ ಬರುವ ಪ್ರತಿಭಾನ್ವಿತ ಮಕ್ಕಳೇ ಮಾದರಿಯಾಗಿ ಕಾಣುತ್ತಿದ್ದಾರೆ. ಮೂರು ವರ್ಷದ ಮಗು ಇಷ್ಟು ಚೆನ್ನಾಗಿ ಎಲ್ಲವನ್ನೂ ಕಲಿಯಬೇಕಾದರೆ ನನ್ನ ಮಗು ಆರು ವರ್ಷವಾದರೂ ಕಲಿಯುತ್ತಿಲ್ಲ ಏಕೆ? ಅವರಂತೆ ನನ್ನ ಮಗುವೂ ಕುಣಿಯಬೇಕು, ಹಾಡಬೇಕು, ರಿಯಾಲಿಟಿ ಶೋಗಳಲ್ಲಿ ಕಾಣಿಸಿಕೊಳ್ಳಬೇಕು, ಎಲ್ಲರೂ ಗುರುತಿಸುವಂತಾಗಬೇಕು ಎಂಬ ಗುಂಗು ತಲೆಗೇರುತ್ತದೆ.

ರಿಯಾಲಿಟಿ ಶೋಗಳಲ್ಲಿ ಕಾಣಿಸಿಕೊಳ್ಳಬೇಕು, ಜನಪ್ರಿಯವಾಗಬೇಕು, ಪ್ರಖ್ಯಾತಿ ಗಳಿಸಬೇಕು ಎಂಬೆಲ್ಲ ಆಸೆಯನ್ನಿಟ್ಟುಕೊಂಡು ಮಕ್ಕಳನ್ನು ತರಗತಿಗಳಿಗೆ ಸೇರಿಸಿ ಪ್ರತಿಭಾನ್ವಿತರನ್ನಾಗಿಸುವ ಪ್ರಯತ್ನ ನಡೆಯುತ್ತಿದೆ. ಈ ಧಾವಂತದಲ್ಲಿ ಹಲವರು ತಮ್ಮ ಮಕ್ಕಳ ನಿರ್ದಿಷ್ಟ ಆಸಕ್ತಿಯನ್ನು ಗುರುತಿಸುವಲ್ಲಿ ಸೋಲುತ್ತಿದ್ದಾರೆ. 'ಇಡೀ ದಿನ ಆಟವಾಡುತ್ತಾ ಸಮಯ ಕಳೆಯುತ್ತಾನೆ'. 'ಆಟವಾಡುವುದಷ್ಟೇ ಅಲ್ಲ, ಪಕ್ಕದಮನೆಯವರಿಂದ ನಿತ್ಯ ಕಂಪ್ಲೇಂಟ್ ಕೇಳಿ ಸಾಕಾಗುತ್ತಿದೆ'. 'ಬೇರೆ ವಿಷಯದತ್ತ ಮನಸ್ಸು ಹರಿಸಿದರೆ ಮಗುವಿನ ಸಮಯ ಸದುಪಯೋಗವಾದೀತು' – ಹೀಗೆ ಬೇರೆ ಬೇರೆ ಕಾರಣಗಳನ್ನೊಡ್ಡಿ ವಿವಿಧ ವಿಷಯಗಳ ತರಗತಿಗಳಿಗೆ ತಮ್ಮ ಮಕ್ಕಳನ್ನು ಸೇರಿಸುವವರ ಸಂಖ್ಯೆ ಕಡಿಮೆಯೇನಿಲ್ಲ. ಇನ್ನೂ ಅನೇಕರು 'ಚಿಕ್ಕಂದಿನಿಂದಲೂ ಸಂಗೀತ–ನೃತ್ಯದ ಕಡೆಗೆ ತನಗೆ ಒಲವಿದ್ದರೂ ಕಲಿಯುವುದು ಸಾಧ್ಯವಾಗಲಿಲ್ಲ. ತನ್ನ ಮಗು ಹಾಡಿ ಕುಣಿಯುವುದನ್ನು ನೋಡಿಯಾದರೂ ಸಂತೋಷ ಕಾಣಬೇಕು' ಎಂದುಕೊಂಡು ತರಬೇತಿಗೆ ಸೇರಿಸುತ್ತಾರೆ. ತಮ್ಮ ಆಸಕ್ತಿ ಹಾಗೂ ಮಗುವಿನ ಉತ್ತಮ ಬೆಳವಣಿಗೆಯ ನಿರೀಕ್ಷೆಯಲ್ಲಿ ದುಬಾರಿ ಶುಲ್ಕ ತುಂಬಿ ತರಗತಿಗಳಿಗೆ ಕಳಿಸುತ್ತಾರೆ.

ತಂದೆತಾಯಿಗಳ ನಿರೀಕ್ಷೆಗೆ ಇಂಬು ನೀಡುವಂತೆ ಮಕ್ಕಳನ್ನು ತಿಂಗಳುಗಳಲ್ಲಿ ಸರ್ವವಿದ್ಯಾಪಾರಂಗತರನ್ನಾಗಿ ಮಾಡಿಬಿಡುತ್ತೇವೆ ಎಂದು ಘೋಷಿಸಿಕೊಳ್ಳುವ ಸಂಸ್ಥೆಗಳು ಗಲ್ಲಿಗಲ್ಲಿಗಳಲ್ಲಿ ತಲೆಯೆತ್ತಿವೆ ಎನ್ನಿ. ನಗರಗಳಲ್ಲಿಯಂತೂ ಇವುಗಳ ಹಾವಳಿ ತುಸು ಹೆಚ್ಚಾಗಿಯೇ ಇದೆ. ಸಂಗೀತಪ್ರಿಯರಿಗೆ ಕರ್ನಾಟಕ ಇಲ್ಲವೇ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಪಿಯಾನೊ, ಗಿಟಾರ್, ವೀಣೆ, ಡ್ರಮ್ಸ್, ಖಂಜೀರಾ, ಕೊಳಲು ಹೀಗೆ ಆಯ್ಕೆಗಳು ಸಾಕಷ್ಟಿವೆ. ಸಂಗೀತದ ಬಗ್ಗೆ ಆಸಕ್ತಿ ಇಲ್ಲದವರಿಗೆ ಹೊಂದುವಂಥ ಡ್ರಾಯಿಂಗ್, ಜಿಮ್ನಾಸ್ಟಿಕ್, ಕ್ರಿಕೆಟ್, ಬ್ಯಾಡ್ಮಿಂಟನ್, ಸ್ವಿಮಿಂಗ್, ಕರಾಟೆ, ಅಬಾಕಸ್ ಮುಂತಾದವುಗಳನ್ನು ಹೇಳಿಕೊಡುವ ಕೋಚಿಂಗ್ ಸೆಂಟರ್‌ಗಳಿವೆ. ಆದಾಯವನ್ನೇ ಮೂಲವಾಗಿಸಿಕೊಂಡ ಹೆಚ್ಚಿನ ಸಂಸ್ಥೆಗಳು ಮಕ್ಕಳ ಆಸಕ್ತಿಯನ್ನು ಗುರುತಿಸುವ ಗೋಜಿಗೂ ಹೋಗದೆ ಬಂದವರನ್ನೆಲ್ಲಾ ತರಗತಿಗೆ ಸೇರಿಸಿಕೊಳ್ಳುತ್ತಿದ್ದಾರೆ. ಇವು ಕೋಚಿಂಗ್ ಸೆಂಟರ್‌ಗಳಿಗಿಂತ ಹೆಚ್ಚಾಗಿ ಫೀಸ್ ಕಲೆಕ್ಷನ್ ಸೆಂಟರ್‌ಗಳಾಗಿರುವುದೇ ಹೆಚ್ಚು.





## ಪಠ್ಯೇತರ ಚಟುವಟಿಕೆಗಳು ಯಾಕೆ ಬೇಕು?

- ಮಗುವಿಗೆ ಖುಷಿ ನೀಡುತ್ತವೆ
- ಮಗುವಿನಲ್ಲಿ ಇರುವ ನಾಯಕತ್ವ ಗುಣ, ಸ್ವಯಂಸೇವಾ ಮನೋಭಾವವನ್ನು ಹೆಚ್ಚಿಸುತ್ತವೆ. ಜವಾಬ್ದಾರಿ, ಸಮಯ ನಿರ್ವಹಣೆ ಬಗ್ಗೆ ಅರಿಯುತ್ತಾರೆ. ಒತ್ತಡದಿಂದ ಮುಕ್ತವಾಗಿರಿಸುತ್ತವೆ.
- ಬೌದ್ಧಿಕ ಶಕ್ತಿಯನ್ನು ವೃದ್ಧಿಸುತ್ತವೆ. ಜೀವನಮೌಲ್ಯ ಹೆಚ್ಚಿಸುವುದರ ಜೊತೆಗೆ ಸಾಮಾಜಿಕ ಕೌಶಲಗಳನ್ನು ಹೇಳಿಕೊಡುತ್ತವೆ.
- ಉತ್ತಮ ಹವ್ಯಾಸ, ಅಭ್ಯಾಸ ಮಕ್ಕಳಿಗೆ ರೂಢಿಯಾಗುತ್ತದೆ.